692 (724) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕಿನ ಶ್ರೀ ಮಲೆಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿರುವ ವಿವಿಧ ಅತಿಥಿ ಗೃಹಗಳಲ್ಲಿ ಇರುವ ಕೊರಡಿಗಳ ಸಂಖ್ಯೆ ಎಷ್ಟು , ಈ ಕೊರಡಿಗಳಿಗೆ ವಿಧಿಸಲಾಗಿರುವ ಬಾಡಿಗೆ ದರ ಎಷ್ಟು ,

ಆ) ಈ ಕೊರಡಿಗಳನ್ನು ಯಾವ ರೀತಿ ಕಾಯ್ದಿರಿಸಲಾಗುವುದು ,

ಇ) ಕೇಂದ್ರ ಸ್ಥಾನದಿಂದ ಕಾಯ್ದಿರಿಸುವ ಕೊರಡಿಗಳನ್ನು ಹೊರತುಪಡಿಸಿ ಸ್ಥಳದಲ್ಲಿಯೇ ಕೊರಡಿಗಳನ್ನು ನೀಡುವಾಗ ನಿಗದಿಪಡಿಸಿರುವ ದರಗಳಿಗಿಂತ ಹೆಚ್ಚಿನ ಹಣವನ್ನು ಪಡೆದುಕೊಂಡು ಭಕ್ತಾದಿಗಳನ್ನು ವಂಚನೆ ಮಾಡುತ್ತಿರುವುದು ನಿಜವೇ ,

ಈ) ಹಾಗಿದ್ದಲ್ಲಿ, ಇದನ್ನು ತಪ್ಪಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ,

ಉ) ದೇವಸ್ಥಾನದಲ್ಲಿರುವ ಎಲ್ಲಾ ಬಗೆಯ ಅತಿಥಿ ಗೃಹಗಳ ಕೊರಡಿಗಳನ್ನು ಬೆಂಗಳೂರಿನಿಂದಲೇ ಕಾಯ್ದಿರಿಸುವ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನಕ್ಕೆ ಸಂಬಂಧಿಸಿದ ವಿವಿಧ ಅತಿಥಿ ಗೃಹಗಳಲ್ಲಿ ಇರುವ ಕೊರಡಿಗಳ ಸಂಖ್ಯೆ ಹಾಗೂ ಅವುಗಳಿಗೆ ದಿನ ಒಂದಕ್ಕೆ ವಿಧಿಸುವ ಬಾಡಿಗೆ ವಿವರ ಈ ಕೆಳಕಂಡಂತಿದೆ

ಅತಿಥಿ ಗೃಹದ ಹೆಸರು	ಕೊರಡಿಗಳ ಸಂಖ್ಯೆ	ದಿನ ಒಂದಕ್ಕೆ ಬಾಡಿಗೆ ದರ ರೂ ಗಳಲ್ಲಿ
ಗಿರಿದರ್ಶಿನಿ	8	200 00
ಗುರುದರ್ಶಿನಿ	24	150 00
ಮಹದೇಶ್ವರ ಭವನ	20	100 00
ಮಹದೇಶ್ವರ ಅತಿದಿ ಗೃಹ	3	200 00

ಸಂಟ್ಬಮ್ ವೇದಾ ಅತಿಧಿ ಗೃಹ	6	ಕೊ 1 ಮತ್ತು 6ಕ್ಕೆ 100 00 ಕೊ 2ರಿಂದ5ಕ್ಕೆ 75 00
ಶಿವದರ್ಶಿನಿ	24	200 00
ಕಾವೇರಿ ದರ್ಶಿನಿ ವಸತಿ ಗೃಹ	12	200 00
ಸೂರ್ಯದರ್ಶಿನಿ	36	200 00
ಶ್ರೀ ಶೈಲ ಭವನ	36	200 00
ಶ್ರೀಮನ್ ಮಹಾರಾಜ ರವರ ಛತ್ರ	7	50 00
"ಡಿ" ಮಾದರಿ ಕುಟೀರಗಳು	15	150 00
"ಡಿ" ಮೊದಲ ಮಹಡಿ	8	75 00
"ಇ" ಮಾದರಿ ಕುಟೀರಗಳು	18	75 00
"ಇ" ಮೊದಲ ಮಹಡಿ	16	75 00
ಟಿ ಎಸ್ ಪಿ ಎಸ್ ಕುಟೀರಗಳು	7	75 00
ಸಿ ಆರ್ ಹೆಚ್	13	75 00
ಎಸಿಸಿಪಿ ಪಿಲಿಗ್ರಿಂ ಶೆಡ್ಡು	2	150 00
ಆರ್‌ಸಿಸಿ ಪಿಲಿಗ್ರಿಂ ಶೆಡ್ಡು	3	150 00
1,2,3,4ನೇ ಬಿಪಿಎಸ್	60	75 00
ಸಂಕಮ್ಮ ನಿಲಯ	20	40 00
ಕಾರಯ್ಯ ನಿಲಯ	20	40 00
ಬಿಲ್ಲಯ್ಯ ನಿಲಯ	20	40 00
ಶೇಷಣ್ಣ ನಿಲಯ	20	40 00
"ಎ" ಮಾದರಿ ಕುರೀರಗಳು	4	40 00
"ಬಿ" – " –	2	ನೌಕರರಿಗೆ ಒದಗಿಸಿದೆ
"ಇ" – " –	2	"

ಆ) ಮೇಲ್ಕಂಡ ಕೊರಡಿಗಳೆಲ್ಲವು (ಗಿರಿದರ್ಶಿನಿ ಕಟ್ಟಡದಲ್ಲಿರುವ 8 ವಿ ಐ ಪಿ ಕೊರಡಿಗಳನ್ನು ಹೊರತುಪಡಿಸಿ) "ನಿಮ್ಮ ಸ್ವಂತ ಕುಟೀರ ಹೊಂದಿದ ಯೋಜನೆ" ಯನ್ವಯ ದಾನಿಗಳ ಕುಟೀರ / ಕೊರಡಿಗಳಾಗಿರುತ್ತದೆ ಸದರಿ

ಯೋಜನೆಯನ್ವಯ ನಿರ್ಮಿಸಿರುವ ವರ್ಷದಲ್ಲಿ 60 ದಿವಸಗಳಿಗೆ ದಾನಿಗಳಾಗಲಿ ಅಥವಾ ಅವರಿಂದ ಅನುಮತಿ ಪತ್ರ ಪಡೆದವರಿಗೆ ನೀಡಲಾಗುತ್ತಿದೆ ದಾನಿಗಳೆಲ್ಲರೂ ಸಾಮಾನ್ಯವಾಗಿ ಬಹುತೇಕ ಜಾತ್ರೆ ಮತ್ತು ವಿಶೇಷ ದಿನಗಳಲ್ಲಿ ಬರುವುದರಿಂದ ಅವರಿಗೆ ಆದ್ಯತೆ ನೀಡಿ ಕಾಯ್ದಿರಿಸಲಾಗುತ್ತಿದೆ ಉಳಿದ ದಿನಗಳಲ್ಲಿ ಹಾಗೂ ವಿಶೇಷ / ಜಾತ್ರೆಗಳಲ್ಲಿ ಲಭ್ಯವಿರುವ ಖಾಲಿ ಕೊರಡಿಗಳನ್ನು ಸಚಿವರು / ಶಾಸಕರು / ಗಣ್ಯವ್ಯಕ್ತಿಗಳು ಹಾಗೂ ಉನ್ನತಾಧಿಕಾರಿಗಳು ಕಾಯ್ದಿರಿಸಲು ನೀಡಿದಂತಹ ಅನುಮತಿ ಪತ್ರಗಳಿಗೆ ಆದ್ಯತೆ ನೀಡಿ ಕಾಯ್ದಿರಿಸಲಾಗುವುದು ಹಾಗೂ ಉಳಿದ ಕೊರಡಿ / ಕುಟೀರಗಳನ್ನು ಭಕ್ತಾದಿಗಳ ಕೋರಿಕೆಯಂತೆ ನೀಡಲಾಗುವುದು

ಇ) ದಾನಿಗಳ ಕೋರಿಕೆಯಂತೆ ದಾನಿಗಳಿಗೆ ಕಾಯ್ದಿರಿಸಿದ ಸಂದರ್ಭದಲ್ಲಿ, ಇಲ್ಲಿಗೆ ಆಗಮಿಸುವ ಭಕ್ತಾದಿಗಳಿಗೆ ಕೊರಡಿ / ಕುರೀರ ಸಿಗದಿದ್ದ ಸಂದರ್ಭದಲ್ಲಿ ಸದರಿ ಕೊರಡಿ / ಕುರೀರಗಳನ್ನು ರಾತ್ರಿ 10 ಘಂಟೆಯವರೆವಿಗೆ ಕಾಯ್ದಿರಿಸಿದ್ದು, ಅವರುಗಳು ಬಾರದಿದ್ದಲ್ಲಿ, ಕೊರಡಿ / ಕುರೀರಗಳಿಗಾಗಿ ಕೌಂಟರ್ ಹತ್ತಿರ ಕಾಯುವ ಭಕ್ತಾದಿಗಳಿಗೆ ನೀಡಲಾಗುತ್ತಿದೆ

ಬಾಡಿಗೆ ದರಗಳಿಗಿಂತ ಹೆಚ್ಚಿನ ಹಣವನ್ನು ಪಡೆದುಕೊಂಡು ವಂಚನೆ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಲಿಖಿತವಾಗಿ ಯಾವುದೇ ದೂರುಗಳು ಇಲಾಖೆಗೆ ಬಂದಿರುವುದಿಲ್ಲ

ಈ) ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಾಗಿ ಹಣವನ್ನು ಭಕ್ತಾದಿಗಳಿಂದ ಪಡೆದು ವಂಚನೆ ಮಾಡುತ್ತಿದ್ದಾರೆಂಬ ಬಗ್ಗೆ ನಿರ್ದಿಷ್ಟ ದೂರುಗಳು ಬಂದಲ್ಲಿ ಇದಕ್ಕೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸಲಾಗುವುದು

ಉ) ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಾಲಯಕ್ಕೆ ಸೇರಿದ ಕುರೀರ / ಕೊರಡಿಗಳು ಜಾತ್ರೆ / ಉತ್ಸವ / ಹಬ್ಬಗಳು ಮುಂತಾದ ಸಂದರ್ಭದಲ್ಲಿ ಹೆಚ್ಚಿನ ಭಕ್ತಾದಿಗಳು / ದಾನಿಗಳು ಒಮ್ಮಿಂದೊಮ್ಮೆ ಆಗಮಿಸುವುದರಿಂದ ಕೊರಡಿಗಳನ್ನು ಕಾಯ್ದಿರಿಸುವ ವ್ಯವಸ್ಥೆ ಬೆಂಗಳೂರಿನಿಂದಲೇ ಮಾಡುವುದು ಕಷ್ಟಸಾಧ್ಯವಾಗುತ್ತದೆ ಏಕೆಂದರೆ ಭಕ್ತಾದಿಗಳು ನೆರೆಯ ತಮಿಳುನಾಡು ಹಾಗೂ ಇತರೆ ಜಿಲ್ಲೆಗಳಿಂದಲೂ ಬೆಟ್ಟಕ್ಕೆ ಆಗಮಿಸುವುದರಿಂದ ಕೊರಡಿಗಳ ಕಾಯ್ದಿರಿಸುವಿಕೆಗಾಗಿ ಬೆಂಗಳೂರಿಗೆ ಬಂದು ಹೋಗುವುದು ವಾಸ್ತವಿಕವಾಗಿ ಕಷ್ಟಸಾಧ್ಯವಾಗಿರುತ್ತದೆ ಆದಾಗ್ಯೂ

ಲಭ್ಯವಿರುವ ವಸತಿ ಗೃಹಗಳಲ್ಲಿ ಶೇಕಡ 50 ರಷ್ಟನ್ನು ಆನ್‌ಲೈನ್ ಮೂಲಕ ಕಾಯ್ದಿರಿಸುವ ಬಗ್ಗೆ ಪರಿಶೀಲಿಸಲಾಗುವುದು

693 (725) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಶ್ರೀ ಮಲೆ ಮಹದೇಶ್ವರ ದೇವಸ್ಥಾನಕ್ಕೆ ನೀಡಿರುವ ಅನುದಾನ ಮೊತ್ತವೆಷ್ಟು, ಈ ಅವಧಿಯಲ್ಲಿ ಹುಂಡಿಯಲ್ಲಿ ಹಾಗೂ ವಿವಿಧ ರೂಪದಲ್ಲಿ ಸಂಗ್ರಹವಾಗಿರುವ ಹಣದ ಮೊತ್ತವೆಷ್ಟು, (ವರ್ಷಾವಾರು ಮಾಹಿತಿ ಒದಗಿಸುವುದು) ,

ಆ) ಮೇಲ್ಕಂಡ ಸರ್ಕಾರದ ಅನುದಾನ ಹಾಗೂ ವಿವಿಧ ರೂಪಗಳಲ್ಲಿ ಸಂಗ್ರಹವಾಗಿರುವ ಹಣದಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ ,

ಇ) ಇಲ್ಲಿರುವ ಅತಿಥಿ ಗೃಹಗಳ ಸಂಖ್ಯೆ ಎಷ್ಟು , ಇವುಗಳಲ್ಲಿರುವ ಕೊರಡಿಗಳ ಸಂಖ್ಯೆ ಎಷ್ಟು , ಕಳೆದ 3 ವರ್ಷಗಳಲ್ಲಿ ಇವುಗಳ ಅಭಿವೃದ್ಧಿಗಾಗಿ ವೆಚ್ಚ ಮಾಡಿರುವ ಹಣ ಎಷ್ಟು ,

ಈ) ಇಲ್ಲಿರುವ ಬಹುತೇಕ ಅತಿಥಿ ಗೃಹಗಳ ಕೊರಡಿಗಳಲ್ಲಿ ಬಿಸಿನೀರಿನ ಸೌಲಭ್ಯಗಳಿಲ್ಲದೇ ಇರುವುದರಿಂದ ಇಲ್ಲಿ ಮಳೆಗಾಲ ಮತ್ತು ಚಳಿಗಾಲದಲ್ಲಿ ತಂಗುವ ಯಾತ್ರಾರ್ಥಿಗಳು ತೀವ್ರವಾದ ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕ್ರಮ ಕೈಗೊಂಡು ಕೊರಡಿಗಳ ದುರಸ್ತಿ ಹಾಗೂ ಎಲ್ಲ ಕೊರಡಿಗಳಿಗೆ ಬಿಸಿನೀರಿನ ವ್ಯವಸ್ಥೆಯನ್ನು ಮಾಡಲಾಗುವುದೇ ,

ಊ) ಮೇಲ್ಕಂಡ ಅವಧಿಯಲ್ಲಿ ನರ್ಕಾರ ನೀಡಿರುವ ಹಾಗೂ ದೇವಸ್ಥಾನದ ಆದಾಯದಿಂದ ಬಂದಿರುವ ಹಣವು ಸದುಪಯೋಗವಾಗದೆ ದುರುಪಯೋಗವಾಗಿರುವ ಬಗ್ಗೆ ಸರ್ಕಾರ ತನಿಖೆ ನಡೆಸುವುದೇ ?

29/4